ರೋಗ ರಹಿತ ರೇಷ್ಮೆ ಬಿತ್ತನೆ ಮೊಟ್ಟೆಗಳು ದೊರೆಯುವ ಬಗ್ಗೆ

1024 - ಶ್ರೀ ಎ.ಟಿ. ರಾಮಸ್ವಾಮಿ (ಅರಕಲ ಗೂಡು) : ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೋಗರಹಿತ ರೇಷ್ಮೆ ಬಿತ್ತನೆ ಮೊಟ್ಟೆಗಳು ದೊರಕದೆ ರೇಷ್ಮೆ ಬೆಳೆಗಾರರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಇ) ಬಿತ್ತನೆ ಮೊಟ್ಟೆಗಳ ದೋಷದಿಂದ ನಷ್ಟಕ್ಕೆ ಒಳಗಾಗುವ ರೈತರಿಗೆ ಸರ್ಕಾರ ಪರಿಹಾರ ದೊರಕಿಸುವ ಕ್ರಮ ಕೈಗೊಳ್ಳುವುದೇ?

ಶ್ರೀ ವಿ. ಮುನಿಯಪ್ಪ (ರೇಷ್ಮೆ ಸಚಿವರು):

ಅ) ಹೌದು.

ಆ) ಮುಂದಿನ ವರ್ಷದ ಪ್ರಾರಂಭದಲ್ಲಿ ಮತ್ತೆ ಈ ರೀತಿ ದೂರು ಬರದ ಹಾಗೆ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1) ಮೊಟ್ಟೆ ಬೇಡಿಕೆಗಳನ್ನು ಜಾಸ್ತಿ ಮಾಡಿ ಮಳೆ ಬಂದ ನಂತರ ಬರತಕ್ಕಂಥ ಬೇಡಿಕೆಗಳನ್ನು ಪೂರೈಸಲಾಗುವುದು.

2) ಬೈವೋಲ್ಟೈನ್ ಮೊಟ್ಟೆಗಳನ್ನು ತಯಾರಿಸಿ ಅಲ್ಪಾವಧಿ ಜಡಾವಸ್ಥೆಯಲ್ಲಿ ಶೈತ್ಯಾಗಾರದಲ್ಲಿಟ್ಟು ಬೇಡಿಕೆ ಬಂದಾಗ ರೈತರಿಗೆ ಒದಗಿಸುವುದು.

ಇ) ಅಂತಹ ಪ್ರಸ್ತಾವನೆ ಇಲ್ಲ.

ಮುಲ್ಕಿ ಕೈಗಾರಿಕಾ ಕೇಂದ್ರದ ಪ್ರಗತಿ

1025 - ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಲ್ಕಿ ಕೈಗಾರಿಕಾ ಕೇಂದ್ರದಲ್ಲಿ ಬೇಕಾದ ಅನುಕೂಲತೆಗಳಿದ್ದರೂ ಈ ತನಕ ಕೇವಲ 5 ಯೂನಿಟ್ಟುಗಳು ಪ್ರಾರಂಭವಾಗಲು ಕಾರಣವೇನು?

ಆ) ಇದು ಮಂಗಳೂರಿನಿಂದ ದೂರವಿದ್ದು, ಹಳ್ಳಿ ವಲಯದಲ್ಲಿದ್ದು ಕಾರ್ಕಳ ಮತ್ತು ಉಡುಪಿ ತಾಲ್ಲೂಕಿಗೆ ಸಮೀಪವಿರುವ ಕಾರಣ ಈ ಕೇಂದ್ರವನ್ನು ಸಿ ಜೋನಿಗೆ ಸೇರಿಸಿವೇಕೆ;

ಇ) ಇಲ್ಲಿ ಕೈಗಾರಿಕೆಗಳನ್ನು ಪ್ರಾರಂಭಿಸುವರೆ ಹಾಗೂ ಸರ್ಕಾರವು ಯಾವತರದ ಉತ್ತೇಜನವನ್ನು ಕೊಡುವ ಯೋಜನೆ ತಯಾರಿಸಿರುವುದು?

ಶ್ರೀ ನಸೀರ್ ಅಹಮದ್ (ಸಣ್ಣ ಕೈಗಾರಿಕಾ ರಾಜ್ಯ ಸಚಿವರು):

ಅ) ದಿನಾಂಕ 1-4-88ರಿಂದ 30-9-90 ರವರೆಗೆ ಈ ತಾಲ್ಲೂಕನ್ನು ವಲಯ -1 ರಲ್ಲಿ ಸೇರಿಸಲಾಗಿತ್ತು. ಆದುದರಿಂದ ಇದಕ್ಕೆ ಯಾವುದೇ ಸಹಾಯಧನ ಹಾಗೂ ಸೌಲಭ್ಯಗಳು ಇರಲಿಲ್ಲವಾದ್ದರಿಂದ ಹೆಚ್ಚು ಘಟಕಗಳು ಪ್ರಾರಂಭವಾಗಿಲ್ಲ. ಆದರೆ ಈ ಬಗ್ಗೆ ಬಂದ ಅರ್ಜಿಗಳನ್ನು ಪರಿಶೀಲಿಸಿ ದಿನಾಂಕ 1-10-90 ರಂದು ಇದನ್ನು ವಲಯ 2 ರಲ್ಲಿ ಸೇರಿಸಲಾಗಿದೆ. ಆದುದರಿಂದ ಇನ್ನು ಮುಂದೆ ಅನೇಕ ಘಟಕಗಳು ಈ ತಾಲ್ಲೂಕಿನಲ್ಲಿ ಬರುವ ನಿರೀಕ್ಷೆ ಇದೆ.

ಆ) ಸರ್ಕಾರವು ಒಂದು ಪ್ರದೇಶವನ್ನು ವಲಯವಾಗಿ ವರ್ಗೀಕರಿಸುವಾಗ ಒಂದು ತಾಲ್ಲೂಕನ್ನು ಪೂರ್ತಿಯಾಗಿ ಒಂದು ವಲಯದಲ್ಲಿ ಸೇರೀಸಲಾಗುತ್ತಿದೆ. ಆದ್ದರಿಂದ ಈ ಪ್ರದೇಶವು ಕಾರ್ಕಳ ಮತ್ತು ಉಡುಪಿ ತಾಲ್ಲೂಕಿಗೆ ಸಮೀಪವಿದ್ದರೂ ಸಹ ಮುಲ್ಕಿಯು ಮಂಗಳೂರು ತಾಲ್ಲೂಕಿನಲ್ಲಿ ಬರುತ್ತಿರುವುದರಿಂದ ದಿನಾಂಕ 1-10-90 ರಿಂದ ಅನ್ವಯವಾಗುವಂತೆ ವಲಯ-2ರಲ್ಲಿ ಸೇರಿಸಲಾಗಿದೆ.